ಸಾಕ್ಷಿಯನ್ನು ದಿಃ**04.02.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 10 ರಿಂದ 14 ನೇ ಪರ ಶ್ರೀ ಜಿ.ಆರ್.ಎಸ್ ವಕೀಲರಿಂದಃ-**

ನಿಪಿ-1 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇನೆ. ನಿಪಿ-1 ರ ದಾಖಲೆಯನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಅದು ಸುಳ್ಳು ದಾಖಲೆಯಾಗಿದೆ. ಒಟ್ಟು ಎರಡು ಎಕರೆ 30 ಗುಂಟೆಗೆ ದಾವೆ ಹಾಕಿದ್ದಾರೆ. ಸದರಿ ಎರಡು ಎಕರೆ 30 ಗುಂಟೆಯ ಬಗ್ಗೆ ನನಗೆ ವೈಯಕ್ತಿಕ ಹಿತಾಸಕ್ತಿ ಇದೆ. ಈ ದಾವೆಯ ಬಗ್ಗೆ ನನಗೆ ಅರಿವು ಇದೆ. ವಾದಿ ನನ್ನ ತಾಯಿ. ದಾವೆಯ ಬಗ್ಗೆ ವಾದಿಗೆ ಅರಿವು ಇಲ್ಲ ಎಂದರೆ ವಯಸ್ಸಾದ ಕಾರಣ ಅರವು ಇಲ್ಲ ಅವರು ನನಗೆ ಅರಿವು ಮೂಡಿಸಿದ್ದಾರೆ. ಎರಡು ಎಕರೆ 30 ಗುಂಟೆಯಲ್ಲಿ ನನಗೆ ಏನು ಕೊಡದೆ ಇರುವ ಕಾರಣ ನಾನು ದಾವೆ ಸಲ್ಲಿಸಿದ್ದೇನೆ. ನನ್ನ ತಾತಾನ ಹೆಸರು ಹುಚ್ಚಯ್ಯ. ಅವರು ಯಾವಗ ತೀರಿ ಹೋದರು ಎಂದು ನನಗೆ ನೆನಪಿಲ್ಲ ನಾನು ಚಿಕ್ಕವನಿದ್ದೆ. ಕೆಂಪುಹುಚ್ಚ ನನ್ನ ತಾತಾನ ತಂದೆ. ಅವರು ಯಾವಗ ತೀರಿ ಹೋದರು ಎಂದು ನನಗೆ ನೆನಪಿಲ್ಲ. ನನ್ನ ತಾಯಿ ಹುಚ್ಚಮ್ಮ 1960 ಅಥವಾ 1965 ರಲ್ಲಿ ಹುಟ್ಟಿರಬಹುದು. ನನ್ನ ತಾಯಿ ಹುಟ್ಟುವ ಕಾಲಕ್ಕೆ ಅವರ ತಾತಾ ಕೆಂಪುಹುಚ್ಚ ಬದುಕಿದ್ದರಾ ಇಲ್ಲವಾ ಎಂದರೆ ಇರಲಿಲ್ಲ. ಕೆಂಪುಹುಚ್ಚರವರಿಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ ಕೆಂಪನಾಯಕ, ಹುಚ್ಚನಾಯಕ ಮತ್ತು ಹುಚ್ಚಮ್ಮ. ಕೆಂಪುಹುಚ್ಚರವರ ಪತ್ನಿಯ ಹೆಸರು ಗೊತ್ತಿಲ್ಲ. ಕೆಂಪುಹುಚ್ಚರವರಿಗೆ ಒಟ್ಟು 2 ಎಕರೆ 30 ಗುಂಟೆ ಆಸ್ತಿ ಇತ್ತು. ಅದರ ಸ.ನಂ.178. ಸ.ನಂ.178 ರಲ್ಲಿ 2 ಎಕರೆ 30 ಗುಂಟೆಯ ದಾಖಲೆಯನ್ನು ನಾನು ನೋಡಿದ್ದೇನೆ. ಕೆಂಪುಹುಚ್ಚಯ್ಯರವರ ಹೆಸರಿನಲ್ಲಿರುವ ದಾಖಲೆಯನ್ನು ನಾನು ನೋಡಿದ್ದೇನೆ. ಅದನ್ನು ಹೊರತಪಡಿಸಿ ಬೇರೆ ದಾಖಲೆ ನೋಡಿಲ್ಲ. ಕೆಂಪುಹುಚ್ಚರವರ ಹೆಸರಿನಲ್ಲಿ

ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆ ನೋಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯನ್ನು ಕೆಂಪು ಹುಚ್ಚರವರ ಹೆಸರಿನಿಂದ ಬೇರೆಯವರ ಹೆಸರಿಗೆ ವರ್ಗಾವಣೆ ಮಾಡಿದ್ದಾರೆಂದು ಕಾಣಿಸಿದ್ದೇನೆ. 35 ಗುಂಟೆಯನ್ನು ಒಬ್ಬ ಡಾಕ್ಟರವರ ಹೆಸರಿನಲ್ಲಿ ವರ್ಗಾವಣೆ ಮಾಡಿದ್ದಾರೆ ಯಾವಾಗ ಎಂದು ಗೊತ್ತಿಲ್ಲ.

ಭವ್ಯ ನನ್ನ ಮಗಳು. ಈ ದಾವೆಗೆ ನನ್ನ ಮಗಳು ಸೂತ್ರಧಾರಿ ಎಂದರೆ ಸರಿ. ನನ್ನ ತಾಯಿಗಿಂತ ನನಗೂ ನನ್ನ ಮಗಳಿಗೂ ಈ ದಾವೆಯಲ್ಲಿ ಹೆಚ್ಚಿ ಹಿತಾಸಕ್ತಿ ಎಂದರೆ ಸಾಕ್ಷಿ ಹೌದು ಎಂದು ಹೇಳಿ ನಂತರ ತಾಯಿಗೆ ಹೆಚ್ಚಿನ ಹಿತಾಸಕ್ತಿ ಎಂದು ನುಡಿಯುತ್ತಾರೆ. ಈ ದಾವೆಯನ್ನು ಒಟ್ಟು ಮೂರು ಜನರ ವಿರುದ್ಧ ಸಲ್ಲಿಸಲಾಗಿದೆ. ನಿಖರವಾಗಿ ಎಷ್ಟು ಜನರ ವಿರುದ್ಧ ಈ ದಾವೆ ಸಲ್ಲಿಸಲಾಗಿದೆ ಎಂದು ನನ್ನ ಮಗಳಾದ ಭವ್ಯಳಿಗೆ ಚೆನ್ನಾಗಿ ಗೊತ್ತು ಎಂದರೆ ಸರಿ. 10 ರಿಂದ 14 ಪ್ರತಿವಾದಿಗಳ ಮನೆಗೂ ಹಾಗೂ ನಮ್ಮ ಮನೆಗೂ ಸುಮಾರು 250 ಅಡಿ ದೂರ. ದಾವಾ ಆಸ್ತಿಗಳಿಗೂ ನನ್ನ ಮನೆಗೂ ಸುಮಾರು ಕಾಲು ಕಿ.ಮೀ ದೂರ. 10 ನೇ ಪ್ರತಿವಾದಿಯ ಗಂಡ ಸ.ನಂ.178/2 ರಲ್ಲಿ 1 ಎಕರೆ ಮೂರುವರೆ ಗುಂಟೆಯನ್ನು ಈಗ್ಗೆ 10 ವರ್ಷದಿಂದ ಸಾಗುವಳಿ ಮಾಡುತ್ತಿದ್ದಾರೆ. ಅದಕ್ಕೂ ಪೂರ್ವದಲ್ಲಿ ಯಾರು ಸಾಗುವಳಿ ಮಾಡುತ್ತಿದ್ದರು ಎಂದರೆ ಅವರೇ ಮಾಡುತ್ತಿದ್ದರು. ಸುಮಾರು 26-27 ವರ್ಷಗಳಿಂದ 10 ನೇ ಪ್ರತಿವಾದಿಯ ಗಂಡ ಅದನ್ನು ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿ. ಕಳೆದ 25 ವರ್ಷಗಳಿಂದ ನನ್ನ ತಾಯಿ ಸದರಿ ಜಮೀನಿನ ಉತ್ಪನ್ನಗಳನ್ನು ಕೊಡಿ ಎಂದು ಕೇಳಿಲ್ಲ. 10 ನೇ ಪ್ರತಿವಾದಿಯ ಗಂಡನ ಹೆಸರಿಗೆ ಎಮ್.ಆರ್, 3/1997-98 ರ ಪ್ರಕಾರ ಖಾತೆ ಬದಲಾವಣೆಗೆ ಆಗಿರುವುದು ನನಗೆ ಗೊತ್ತಿಲ್ಲ. ನಾನು ಅದಕ್ಕೆ ಪೂರಕವಾಗಿ ದಾಖಲೆಯನ್ನು ಸಲ್ಲಿಸಿಲ್ಲ.

**ಮುಂದುವರೆದ ಪಾಟೀಸವಾಲು ಕೋರಿಕೆಯ ಮೇಲೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.